# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1179 |
| ಸದಸ್ಯರ ಹೆಸರು | ಶ್ರೀ. ಪ್ರತಾಪ್ ಸಿಂಹ ನಾಯಕ್. ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 15.12.2023 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ "ಕೃಷಿ ಯಂತ್ರಧಾರೆ" ಯೋಜನೆಯಡಿ ಕಾರ್ಯನಿರ್ವಹಿಸುತ್ತಿದ್ದ ಹಲವು ಕೃಷಿ ಯಂತ್ರ ಕೇಂದ್ರಗಳ ಗುತ್ತಿಗೆ ಅವಧಿ ಮುಗಿದು ಸಾಕಷ್ಟು ಸಮಯ ಕಳೆದಿದ್ದರೂ ಇದುವರೆವಿಗೂ ನವೀಕರಣವಾಗದೇ ಇರುವುದರಿಂದ ಅಥವಾ ಹೊಸ ಕಂಪನಿಗಳಿಗೆ ಗುತ್ತಿಗೆ ವಹಿಸದೇ ಇರುವುದರಿಂದ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ರಾಜ್ಯದಲ್ಲಿ ಒಟ್ಟು ಕೃಷಿ ಯಂತ್ರ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು; ಪ್ರಸ್ತುತ, ಎಷ್ಟು ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಎಷ್ಟು ಕೇಂದ್ರಗಳು ಸ್ಥಗಿತಗೊಂಡಿವೆ: (ಜಿಲ್ಲಾವಾರು ವಿವರ ನೀಡುವುದು). | ರಾಜ್ಯದಲ್ಲಿ ಇಲ್ಲಿಯವರೆಗೆ ಸ್ಥಾಪಿಸಲಾಗಿರುವ 697 ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ 304 ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, 393 ಕೇಂದ್ರಗಳು ಸ್ಥಗಿತಗೊಂಡಿರುತ್ತವೆ.<br><br>ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಇ) | ಹಲವು ಕೃಷಿ ಯಂತ್ರ ಕೇಂದ್ರಗಳು ಈ ರೀತಿ ಸ್ಥಗಿತಗೊಳ್ಳಲು ಕಾರಣಗಳೇನು: | ಕೃಷಿ ಯಂತ್ರಧಾರೆ ಕೇಂದ್ರಗಳು ಸ್ಥಗಿತಗೊಂಡಿರಲು ಪ್ರಮುಖ ಕಾರಣಗಳು ಈ ಕೆಳಕಂಡಂತಿವೆ:<br><br>1.ಕ್ಷೇತ್ರ ಮಟ್ಟದಲ್ಲಿ ಕೃಷಿಗೆ ಬಳಸುವ ಯಂತ್ರೋಪಕರಣಗಳ ಕನಿಷ್ಠ ಉಪಯೋಗಿತ ಕಾರ್ಯಾವಧಿಯು ಅಂದಾಜು ಏಳು ವರ್ಷಗಳಾಗಿರುತ್ತದೆ. ಆದರಿಂದ ಸ್ಥಾಪನೆಯಾಗಿ ಏಳು ವರ್ಷಗಳು ಕಳೆದಿರುವ ಯಂತ್ರಧಾರೆ ಕೇಂದ್ರಗಳಲ್ಲಿ ದಾಸ್ತಾನು ಮಾಡಲಾದ ಯಂತ್ರೋಪಕರಣಗಳು ದುರಸ್ತಿಗೂ ಮೀರಿ ಹಾಳಾಗಿರುವುದು. |

| | | |
|---|---|---|
| | | 2.ಒಡಂಬಡಿಕೆ ಅವಧಿಯು ಮುಕ್ತಾಯ ಗೊಂಡಿರುವುದು.<br>3.ಒಡಂಬಡಿಕೆ ಅವಧಿಯ ವಿಸ್ತರಣೆಗೆ ಸೇವಾದಾರ ಸಂಸ್ಥೆಗಳು ಒಪ್ಪದಿರುವುದು.<br>4.ವಿಸ್ತೃತ ಒಡಂಬಡಿಕೆ ಅವಧಿಯಲ್ಲಿ ಸೇವಾದಾರ ಸಂಸ್ಥೆಗಳು ಕೃಷಿ ಯಂತ್ರಧಾರೆ ಕೇಂದ್ರಗಳನ್ನು ನಿರ್ವಹಣೆ ಮಾಡಲು ಒಪ್ಪದಿರುವುದು.<br>5.ಅಸಮರ್ಪಕ ಕಾರ್ಯನಿರ್ವಹಣೆಯಿಂದ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ವಶಪಡಿಸಿಕೊಂಡಿರುವುದು.<br>6.ಒಡಂಬಡಿಕೆ ಅವಧಿಯು ಮುಗಿದು ಹೋದ ಕೃಷಿ ಯಂತ್ರಧಾರೆ ಕೇಂದ್ರಗಳ ತಮ್ಮ ಪಾಲಿನ ಹೂಡಿದ ಬಂಡವಾಳವನ್ನು ಸೇವಾದಾರ ಸಂಸ್ಥೆಗಳು ಕೇಳುತ್ತಿರುವುದು. |
| ಈ) | ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ಕಡಿಮೆ ಬಾಡಿಗೆಯಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸುತ್ತಿದ್ದ ಈ ಕೇಂದ್ರಗಳು ಸ್ಥಗಿತಗೊಂಡು ರೈತರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಸರ್ಕಾರ ಸಕಾಲದಲ್ಲಿ ಕ್ರಮ ವಹಿಸದಿರುವುದಕ್ಕೆ ಕಾರಣಗಳೇನು: | ಒಡಂಬಡಿಕೆ ಅವಧಿಯಲ್ಲಿ ಅಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಅಥವಾ ಸ್ಥಗಿತಗೊಂಡಿರುವ ಅಥವಾ ಒಡಂಬಡಿಕೆ ಅವಧಿ ಮೀರಿದ ನಂತರ ಒಡಂಬಡಿಕೆಯನ್ನು ವಿಸ್ತರಿಸಲು ಇಚ್ಛಿಸದ ಸೇವಾದಾರ ಸಂಸ್ಥೆಗಳು ನಿರ್ವಹಿಸುತ್ತಿರುವ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಇತರೆ ಆಸಕ್ತಿಯುಳ್ಳ ಸಂಸ್ಥೆಗಳಿಗೆ ಹಸ್ತಾಂತರಿಸಲು ಆಯಾ ಜಿಲ್ಲಾ ಪಂಚಾಯತ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಅಧಿಕಾರವನ್ನು ನೀಡಲಾಗಿರುತ್ತದೆ. ಮುಂದುವರೆದು, ಕೆಲವೊಂದು ಸೇವಾದಾರ ಸಂಸ್ಥೆಗಳು ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ಹೂಡಿದ ತಮ್ಮ ಪಾಲಿನ ಹೂಡಿದ ಬಂಡವಾಳ (Written Down Value) ವನ್ನು ಕೇಳುತ್ತಿರುವುದು ಹಾಗೂ ಸದರಿ ಆದೇಶಕ್ಕೆ ರಾಜ್ಯ ಉಚ್ಚ ನ್ಯಾಯಾಲದಿಂದ ತಡೆಯಾಜ್ಞೆ ನೀಡಿರುವುದು ಸಹ ಕಾರಣವಾಗಿರುತ್ತದೆ. |
| ಉ) | ಸ್ಥಗಿತಗೊಂಡಿರುವ ಕೃಷಿ ಯಂತ್ರ ಕೇಂದ್ರಗಳನ್ನು ಪುನರಾರಂಭಗೊಳಿಸುವುದರ ಜೊತೆಗೆ ಬೇಡಿಕೆಗನುಗುಣವಾಗಿ ಹೊಸ ಕೇಂದ್ರಗಳನ್ನು ತೆರೆಯಲು ಸರ್ಕಾರ ಈ ಕೂಡಲೇ ಸೂಕ್ತ ಕ್ರಮ ವಹಿಸುವುದೇ? | ಸ್ಥಗಿತಗೊಂಡಿರುವ / ಒಡಂಬಡಿಕೆ ಅವಧಿಯು ಅಂತ್ಯಗೊಂಡಿರುವ / ಅಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಒಡಂಬಡಿಕೆ ಅವಧಿಯ ನಂತರ ಮುಂದುವರೆಸಲು ಇಚ್ಛಿಸದ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಇತರೆ ಆಸಕ್ತಿಯುಳ್ಳ ಸಂಘ-ಸಂಸ್ಥೆಗಳಿಗೆ ಹಸ್ತಾಂತರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ |

## ಅನುಬಂಧ - LCQ 1179

### ಜಿಲ್ಲಾವಾರು ಕೃಷಿ ಯಂತ್ರಧಾರೆ ಕೇಂದ್ರಗಳ ವಿವರಗಳು (ಸಂಖ್ಯೆಗಳಲ್ಲಿ)

| ಕ್ರ. ಸಂ. | ಜಿಲ್ಲೆ | ಸ್ಥಾಪಿಸಲಾಗಿರುವ ಒಟ್ಟು ಕೇಂದ್ರಗಳು | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳು | ಸ್ಥಗಿತಗೊಂಡಿರುವ ಕೇಂದ್ರಗಳು |
|---|---|---|---|---|
| 1 | ಬಾಗಲಕೋಟೆ | 18 | 16 | 2 |
| 2 | ಬೆಂಗಳೂರು | 28 | 12 | 16 |
| 3 | ಬೆಳಗಾವಿ | 33 | 23 | 10 |
| 4 | ಬಳ್ಳಾರಿ | 13 | 3 | 10 |
| 5 | ಬೀದರ್ | 30 | 24 | 6 |
| 6 | ಚಾಮರಾಜನಗರ | 16 | 4 | 12 |
| 7 | ಚಿಕ್ಕಬಳ್ಳಾಪುರ | 26 | 10 | 16 |
| 8 | ಚಿಕ್ಕಮಗಳೂರು | 30 | 14 | 16 |
| 9 | ಚಿತ್ರದುರ್ಗ | 22 | 12 | 10 |
| 10 | ದಕ್ಷಿಣ ಕನ್ನಡ | 16 | 6 | 10 |
| 11 | ದಾವಣಗೆರೆ | 20 | 5 | 15 |
| 12 | ಧಾರವಾಡ | 14 | 13 | 1 |
| 13 | ಗದಗ | 11 | 6 | 5 |
| 14 | ಹಾಸನ | 38 | 9 | 29 |
| 15 | ಹಾವೇರಿ | 19 | 9 | 10 |
| 16 | ಕಲಬುರಗಿ | 32 | 5 | 27 |
| 17 | ಕೊಡಗು | 16 | 4 | 12 |
| 18 | ಕೋಲಾರ | 27 | 6 | 21 |
| 19 | ಕೊಪ್ಪಳ | 20 | 7 | 13 |
| 20 | ಮಂಡ್ಯ | 31 | 11 | 20 |
| 21 | ಮೈಸೂರು | 33 | 9 | 24 |
| 22 | ರಾಯಚೂರು | 37 | 34 | 3 |
| 23 | ರಾಮನಗರ | 10 | 4 | 6 |
| 24 | ಶಿವಮೊಗ್ಗ | 31 | 7 | 24 |
| 25 | ತುಮಕೂರು | 50 | 12 | 38 |
| 26 | ಉಡುಪಿ | 9 | 9 | 0 |
| 27 | ಉತ್ತರ ಕನ್ನಡ | 15 | 11 | 4 |
| 28 | ವಿಜಯನಗರ | 18 | 5 | 13 |
| 29 | ವಿಜಯಪುರ | 18 | 11 | 7 |
| 30 | ಯಾದಗಿರಿ | 16 | 3 | 13 |
| **ಒಟ್ಟು** | | **697** | **304** | **393** |

***

| | | |
|---|---|---|
| | | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಮಟ್ಟದ ಉಪಕರಣ ಸಮಿತಿಗೆ ಆದೇಶಿಸಿ ಅಧಿಕಾರ ನೀಡಲಾಗಿರುತ್ತದೆ.<br><br>ಹೊಸ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ತೆರೆಯಲು ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. ಆದಾಗ್ಯೂ, ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ಬಾಡಿಗೆ ರೂಪದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸುವ ಹಾಗೂ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಬಲಪಡಿಸುವ ನಿಟ್ಟಿನಲ್ಲಿ ರಾಜ್ಯದಲ್ಲಿ ಹೈಟೆಕ್ ಹಾರ್ವೆಸ್ಟರ್ ಹಬ್ ಗಳನ್ನು ಸ್ಥಾಪಿಸುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. |

ಸಂಖ್ಯೆ: AGRI/166/ASC/2023

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು